ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮದ ನೋಂದಾಯಿತ ಕಚೇರಿ: ನಂ: 29,
ವಿಜಯನಗರ 2 ನೇ ಹಂತ,
ಕಾವೇರಿ ಗ್ರಾಮೀಣ ಬ್ಯಾಂಕ್ ರಸ್ತೆ, ಹಿನಕಲ್,
ಮೈಸೂರು–570017
ನಿಗಮ ವೆಬ್ ಸೈಟ್:www.cescmysore.org.
ಇಮೇಲ್: gmcescmysore@gmail.com
CIN No.U40109KA2004SGC035177

ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್ (ವಿ)
ರವರ ಕಚೇರಿ ಚಾವಿಸನಿನಿ, ಕಾಹಿಪಾ ನಗರ ಉಪ ವಿಭಾಗ
ಮದ್ದೂರು–571428
ದೂರವಾಣಿ: 08232–232015,
ಮೊಬೈಲ್: 9448994845
ಫ್ಯಾಕ್ಸ್: 08232–233600
ಇ–ಮೇಲ್: aee_maddur@rediffmail.com

ಕ್ರಮಾಂಕ:ಸಕಾನಿಇಂ(ವಿ)/ಕಾ&ಪಾ,ನಉವಿ/ಮದ್ದೂರು–1/2017–18/ 532-33 ದಿನಾಂಕ: 30-5-17
ಲಗತ್ತು:

## ಜನಸಂಪರ್ಕ ಸಭೆ

ದಿನಾಂಕ:20/05/2017 ರಂದು ನಗರ ಉಪವಿಭಾಗ ವ್ಯಾಪ್ತಿಯ ಗ್ರಾಹಕರ ಜನಸಂಪರ್ಕ ಸಭೆಯನ್ನು ನಡೆಸಲಾಯಿತು. ಸಭೆಯಲ್ಲಿ ಹಾಜರಿದ್ದ ಗ್ರಾಹಕನ್ನು ಸಭೆಯ ಅಧ್ಯಕ್ಷತೆ ವಹಿಸಿದ್ದ ಶ್ರೀ ರವಿಶಂಕರ್, ಪ್ರಭಾರ ಅಧೀಕ್ಷಕ ಭಿಯಂತರರು ಮಂಡ್ಯ ವೃತ್ತ ರವರು ಸ್ವಾಗತಿಸಿ, ವಿದ್ಯುತ್ ಸರಬರಾಜಿಗೆ ಸಂಬಂಧಿಸಿದಂತೆ ಅಹವಾಲುಗಳನ್ನು ನೀಡಲು ಕೋರಲಾಯಿತು.

### ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು.

| ಕ್ರಮ ಸಂಖ್ಯೆ | ಹೆಸರು | ಅಧಿಕಾರಿಗಳ ಪದನಾಮ | |
|---|---|---|---|
| 1 | ಶ್ರೀ ರವಿಶಂಕರ್ | ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ) ಮಂಡ್ಯ ವೃತ್ತ | ಉಪಸ್ಥಿತರಿದ್ದವರು |
| 2 | ಶ್ರೀ ರವಿಶಂಕರ್ | ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ಮಂಡ್ಯ ವೃತ್ತ | ಉಪಸ್ಥಿತರಿದ್ದವರು |
| 3 | ಶ್ರೀ ನಾಗಭೂಷಣ್ | ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ಮದ್ದೂರು ವಿಭಾಗ | ಉಪಸ್ಥಿತರಿದ್ದವರು |
| 4 | ಶ್ರೀಮತಿ ಶ್ವೇತ | ಸ.ಕಾ.ನಿ. ಇಂಜಿನಿಯರ್(ವಿ) ಮದ್ದೂರು ವಿಭಾಗ | ಉಪಸ್ಥಿತರಿದ್ದವರು |
| 5 | ಶ್ರೀ ನಾಗರಾಜು | ಲೆಕ್ಕಾಧಿಕಾರಿ, ಮದ್ದೂರು ವಿಭಾಗ | ಉಪಸ್ಥಿತರಿದ್ದವರು |
| 6 | ಶ್ರೀ ಶ್ರೀಕಾಂತ್ | ಸ.ಕಾ.ನಿ. ಇಂಜಿನಿಯರ್(ವಿ) ನಗರ ಉಪವಿಭಾಗ ಮದ್ದೂರು | ಉಪಸ್ಥಿತರಿದ್ದವರು |
| 7 | ಶ್ರೀಮತಿ ಸುವರ್ಣ | ಸಹಾಯಕ ಇಂಜಿನಿಯರ್(ವಿ) ತಾಂತ್ರಿಕ ನಉವಿ. ಮದ್ದೂರು | ಉಪಸ್ಥಿತರಿದ್ದವರು |
| 8 | ಶ್ರೀ ಹೆಚ್.ಎಂ.ರವಿ | ಸ.ಇಂಜಿನಿಯರ್(ವಿ), ಪಟ್ಟಣ ಘಟಕ ಮದ್ದೂರು | ಉಪಸ್ಥಿತರಿದ್ದವರು |
| 9 | ಶ್ರೀ ಹೆಚ್.ಸಿ.ರಾಮಚಂದ್ರ | ಕಿರಿಯ ಇಂಜಿನಿಯರ್(ವಿ) ಸೋಮನಹಳ್ಳಿ ಘಟಕ ಮದ್ದೂರು | ಉಪಸ್ಥಿತರಿದ್ದವರು |
| 10 | ಶ್ರೀ ರಾಜೇಶ್ | ಕಿರಿಯ ಇಂಜಿನಿಯರ್(ವಿ) ಘಟಕ –2 ಕೆ.ಎಂ.ದೊಡ್ಡಿ | ಉಪಸ್ಥಿತರಿದ್ದವರು |
| 11 | ಶ್ರೀ ಶಿವರಾಮು | ಪ್ರ. ಕಿರಿಯ ಇಂಜಿನಿಯರ್(ವಿ) ಘಟಕ –1 ಕೆ.ಎಂ.ದೊಡ್ಡಿ | ಉಪಸ್ಥಿತರಿದ್ದವರು |

### ಸಭೆಯಲ್ಲಿ ಹಾಜರಿದ್ದ ಗ್ರಾಹಕರು,

| ಕ್ರಮ ಸಂಖ್ಯೆ | ಗ್ರಾಹಕರ ಹೆಸರು |
|---|---|
| 1 | ಶ್ರೀ ಕೃಷ್ಣ |
| 2 | ಶ್ರೀ ಶಿವಲಿಂಗಯ್ಯ |
| 3 | ಶ್ರೀ ರಫೀಕ್ |
| 4 | ಶ್ರೀ ಎಂ.ಮಂಜುನಾಥ್ |
| 5 | ಶ್ರೀ ಪಾಪಣ್ಣ ಶಿವಪುರ |
| 6 | ಶ್ರೀ ಶೇಖರ ಟಿ.ಬಿ.ಹಳ್ಳಿ |
| 7 | ಶ್ರೀ ಸಿ.ಪ್ರಶಾಂತ ಸಿ.ಎ.ಕೆರೆ |
| 8 | ಶ್ರೀ ಸಿ.ಸುರೇಶ |
| 9 | ಶ್ರೀ ಶ್ರೀಕಂಠೇಗೌಡ |
| 10 | ಶ್ರೀ ಆನಂದ ಕೆ.ಆರ್. |
| 11 | ಕೆ.ಸಿ.ಮಲ್ಲರಾಜು |
| 12 | ಶ್ರೀ ನಾಗೇಶ್ |
| 13 | ಎ.ವಿ.ನಿತಿನ್ ಕುಮಾರ್ |
| 14 | ಶ್ರೀ ನಾಗೇಶ್ |
| 15 | ಶ್ರೀ ಎಸ್.ಜಯರಾಮು ಅಲಭುಜನಹಳ್ಳಿ |
| 16 | ಶ್ರೀ ವಿ.ಎಂ.ಬಸವರಾಜು ಅಜ್ಜಹಳ್ಳಿ |

1. ಸಿ.ಎ.ಕೆರೆ ಗ್ರಾಮದ ಶ್ರೀ ಪ್ರಶಾಂತ್ ರವರು ಅಹವಾಲು ನೀಡಿ ಅಕ್ರಮ ಸಕ್ರಮ ಯೋಜನೆಯಡಿ ಶೀಘ್ರವಾಗಿ ಸಂಪರ್ಕ ಕಲ್ಪಿಸಿಕೊಡಲು ಕೋರಿದರು.

→ ಈ ಬಗ್ಗೆ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ), ವೃತ್ತ ಕಚೇರಿ ಮಂಡ್ಯ ರವರು ಮಾತನಾಡಿ, ತಾವು 14/09/2016 ಮತ್ತು 20/10/2016ರಲ್ಲಿ ಮೊತ್ತ ಪಾವತಿಸಿದ್ದು, ಹಿರಿತನದ ಆಧಾರದ ಮೇಲೆ ಸಂಪರ್ಕ ಕಲ್ಪಿಸಿಕೊಡಲಾಗುವುದು, ತುರ್ತಾಗಿ ಸಂಪರ್ಕ ಬೇಕಿದ್ದರೆ ಸ್ವಂತ ಕಾಮಗಾರಿಯಲ್ಲಿ ಮಾಡಿಕೊಳ್ಳಲು ಸೂಚಿಸಲಾಯಿತು.

2. ಅಲಭುಜನಹಳ್ಳಿ ಜಯರಾಮುರವರು ಮಾತನಾಡಿ, ಐ.ಪಿ.ಸ್ಥಾವರಗಳಿಗೆ 25ಕೆವಿಎ ಪರಿವರ್ತಕ ಇರುವ ಸ್ಥಳಗಳಲಿ ಓವರ್ ಲೋಡ್ ಆಗಿದ್ದು 63 ಕೆವಿಎಗೆ ಮಾಡಿಸಿಕೊಡಲು ಕೋರಿದರು.

→ ಇದಕ್ಕೆ ಪ್ರತಿಕ್ರಿಯಿಸಿದ ಕಾ.ನಿ.ಇಂ(ವಿ), ಮಂಡ್ಯ ವೃತ್ತ ರವರು ಪರಿಹಾರ ನೀಡಿ ಪ್ರಸಕ್ತ ಯೋಜನೆಯಡಿ 63ಕೆವಿಎಗೆ ಪರಿವರ್ತಿಸಲು ಅವಕಾಶವಿರುವುದಿಲ್ಲ ಮತ್ತು 63ಕೆವಿಎಗೆ ಪರಿವರ್ತಿಸಿದ್ದಲ್ಲಿ ತಮಗೆ ಲೋ ವೋಲ್ಟೇಜ್ ಸಮಸ್ಯೆ ಬರುವುದರಿಂದ, ಅಕ್ರಮವಾಗಿ ಸಂಪರ್ಕ ಕಲ್ಪಿಸಿಕೊಂಡಿರುವ ಸ್ಥಾವರಗಳಿಗೆ ಆರ್.ಯು.ಐ.ಪಿ. ಯೋಜನೆಯಡಿ ಮೊತ್ತ ಪಾವತಿಸಿದ್ದಲ್ಲಿ ಹಿರಿತನದ ಆಧಾರದ ಮೇಲೆ ಸಂಪರ್ಕ ಕಲ್ಪಿಸಿಕೊಡಲಾಗುವುದು ಎಂದು ತಿಳಿಸಿದರು.

3. ಜಯರಾಮು ಗೌಡಯ್ಯನ ದೊಡ್ಡಿರವರು ಆರ್.ಯು.ಐ.ಪಿ. ಯೋಜನೆಯಡಿ ಸಂಪರ್ಕ ಕಲ್ಪಿಸಲು ಕೋರಿದ್ದರು.

→ ದಿನಾಂಕ:17.2.2017 ರಲ್ಲಿ ತಾವು ಪಾವತಿಸಿರುವುದರಿಂದ ಹಿರಿತನದ ಆಧಾರದ ಮೇಲೆ ಸಂಪರ್ಕ ಕಲ್ಪಿಸಲಾಗುವುದು ಎಂದು ತಿಳಿಸಲಾಯಿತು. ತುರ್ತಾಗಿ ಅವಶ್ಯಕತೆ ಇದ್ದಲ್ಲಿ ಸ್ವಂತ ಕಾಮಗಾರಿ ಆಧಾರದಲ್ಲಿ ಕಾಮಗಾರಿ ನಿರ್ಮಿಸಿಕೊಳ್ಳಬಹುದು. ನಿಗಮದಿಂದ ಪರಿವರ್ತಕ ನೀಡಲಾಗುವುದು ಜೊತೆ ಮೇಲ್ವಿಚಾರಣಾ ಶುಲ್ಕ ಮತ್ತು ವಿದ್ಯುತ್ ಪರಿವೀಕ್ಷಣ ಶುಲ್ಕದಲ್ಲಿ ವಿನಾಯಿತಿಯನ್ನು ಸಹ ಕಲ್ಪಿಸಲಾಗಿರುತ್ತದೆ.

4. ಪಾಪಣ್ಣ ಶಿವಪುರ ರವರು ಮಾತನಾಡಿ, ಶಿವಪುರದಲ್ಲಿ ಪರಿವರ್ತಕದಲ್ಲಿ ಕಿಡಿ ಬರುತ್ತಿದ್ದು, ಈ ಬಗ್ಗೆ ಮಾಹಿತಿ ಸಲ್ಲಿಸಲು ಯಾವ ದೂರವಾಣಿಗೆ ಸಂಪರ್ಕಿಸಬೇಕು ಎಂದು ಕೋರಲಾಯಿತು.

→ ಈ ಸಂಬಂಧ ವಿದ್ಯುತ್‌ಗೆ ಸಂಬಂಧಿಸಿದ ಸಮಸ್ಯೆಗಳಿಗೆ ತುರ್ತಾಗಿ ಸಂಪರ್ಕಿಸಲು ಸಹಾಯಕ ಇಂಜಿನಿಯರ್(ವಿ) ಮತ್ತು ಸ.ಕಾ.ನಿ.ಇಂಜನಿಯರ್(ವಿ)ರವರ ದೂರವಾಣಿ ಸಂಖ್ಯೆಯನ್ನು ನೀಡಲಾಯಿತು.

5. ದಿನಾಂಕ:17.05.2017 ರಂದು ಬೆಳಿಗ್ಗೆಯಿಂದಲೂ ವಿದ್ಯುತ್ ಸರಬರಾಜು ಇರಲಿಲ್ಲ. ಈಬಗ್ಗೆ ದೂರವಾಣಿ ಮುಖಾಂತರ ಕೇಳಿದಾಗ ಟಿ.ಕೆ.ಹಳ್ಳಿ ಸ್ಟೇಷನ್ ನಲ್ಲಿ ನಿರ್ವಹಣೆ ಕಾರ್ಯ ಇದ್ದುದರಿಂದ ಸರಬರಾಜು ಇರಲಿಲ್ಲ, ಈ ಬಗ್ಗೆ ಪತ್ರಿಕಾ ಪ್ರಕಟಣೆಯನ್ನು ಸಹ ನೀಡಲಾಗಿತ್ತು ಎಂದು ತಿಳಿಸಲಾಯಿತು.

→ ಮುಂದುವರೆದು ಪದೇ ಪದೇ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತಿರುತ್ತದೆ ಎಂದು ದೂರಿದರು.

ಈ ಸಂಬಂಧ ಪ್ರತಿಕ್ರಿಯಿಸಿ ಓವರ್ ಲೋಡ್ ಇರುವ ಕಡೆ ವಿದ್ಯುತ್ ವ್ಯತ್ಯಯ ಮತ್ತು ಲೋ ವೋಲ್ಟೇಜ್ ಸಮಸ್ಯೆ ಇದ್ದು ಈಗಾಗಲೇ ಐ.ಪಿ.ಡಿ.ಎಸ್. ಯೋಜನೆಯಡಿ ಅಂದಾಜು ಪಟ್ಟಿ ತಯಾರಿಸಿದ್ದು, ಜಂಟಿ ತಪಾಸಣೆ ನಡೆಸಿದ್ದು ಶೀಘ್ರವಾಗಿ ಕಾಮಗಾರಿ ಕಲ್ಪಿಸಿ ಸಮಸ್ಯೆ ಪರಿಹರಿಸಿ ಕೊಡಲಾಗುವುದು ಎಂದು ತಿಳಿಸಲಾಯಿತು.

ಶಾಖಾಧಿಕಾರಿ ಮತ್ತು ಇತರೆ ಅಧಿಕಾರಿಗಳಿಗೆ ಕರೆ ಮಾಡಿದರೆ ಬ್ಯುಸಿ ಬ್ಯುಸಿ ಎಂದು ಬರುತ್ತಿರುತ್ತದೆ ಇದರಿಂದ ಸಮಸ್ಯೆಗಳನ್ನು ಹೇಳಲು ಸಾಧ್ಯವಾಗಿರುವುದಿಲ್ಲ ಎಂದು ದೂರಿರುತ್ತಾರೆ.

ಈ ಬಗ್ಗೆ ಕಾ.ನಿ.ಇಂ(ವಿ) ಪ್ರತಿಕ್ರಿಯಿಸಿ ನಿರಂತರವಾಗಿ ಕರೆಗಳು ಬರುತ್ತಿರುವುದರಿಂದ ಬ್ಯುಸಿಯಾಗುತ್ತದೆ ಎಂದು ಗ್ರಾಹಕರಿಗೆ ಮನವರಿಕೆ ಮಾಡಿ ಮರು ಸಂಪರ್ಕಿಸಲು ಸೂಚಿಸಿದರು ಹಾಗೂ ಶಾಖಾಧಿಕಾರಿಗಳಿಗೆ ಸೂಚನೆ ನೀಡಿ ಮರು ಸಂಪರ್ಕಿಸಲು ಸೂಚಿಸಲಾಯಿತು.

6. ಪ್ರಶಾಂತ್ ಸಿ.ಎ.ಕೆರೆ ರವರು ಮಾಹಿತಿ ನೀಡಿ ಸಿ.ಎ.ಕೆರೆ ಗ್ರಾಮದಲ್ಲಿ ತುಂಬಾ ಹಳೆಯ ಕಂಬಗಳಿರುವುದರಿಂದ ಲೈನುಗಳು ಜೋತು ಬಿದ್ದಿದ್ದು ಗದ್ದೆಗಳಲ್ಲಿ ಕಬ್ಬಿಗೆ ತಾಗುವ ಸ್ಥಿತಿಯಲ್ಲಿರುತ್ತವೆ ಎಂದು ಸರಿಪಡಿಸಲು ಕೋರಿದರು.

→ ಈಗಾಗಲೇ ಶಾಖಾಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಅಂದಾಜು ಪಟ್ಟಿ ತಯಾರಿಸಿದ್ದು DDUJY ಯೋಜನೆಯಡಿ ಕಾಮಗಾರಿಯನ್ನು ಶೀಘ್ರವಾಗಿ ನಿರ್ಮಿಸಿಕೊಡಲಾಗುವುದು ಎಂದು ತಿಳಿಸಲಾಯಿತು.

7. ಎ.ಎಂ. ಬಸವರಾಜು ಅಜ್ಜಹಳ್ಳಿ ರವರು ಅಹವಾಲು ನೀಡಿ ಐ.ಪಿ. ಸ್ಥಾವರಕ್ಕೆ ಮೊತ್ತ ಪಾವತಿಸಿದ್ದು ಪರಿವರ್ತಕ ಅಳವಡಿಸಿ ಕೊಡಲು ಕೋರಲಾಯಿತು.

→ ಇದಕ್ಕೆ ಪ್ರತಿಕ್ರಿಯಿಸಿ ಈಗಾಗಲೇ ಆರ್.ಕೆ.ಅಸೋಸಿಯೇಟ್ಸ್‌ರವರಿಗೆ ಕಾಮಗಾರಿ ವಹಿಸಿದ್ದು ಕೂಡಲೇ ಸಂಪರ್ಕ ಕಲ್ಪಿಸಲಾಗುವುದು ಎಂದು ತಿಳಿಸಲಾಯಿತು.

8. ಹುಲಿಗೆರೆಪುರ ಸಿದ್ದರಾಮು ರವರು ಮಾತನಾಡಿ ಸ್ಕೂಲ್ ಹತ್ತಿರ ಎರಡು ಕಂಬಗಳ ಅಂತರ ಅಧಿಕವಾಗಿದ್ದು 11ಕೆವಿ ವಿದ್ಯುತ್ ಲೈನ್ ಆಗಿದ್ದು ಮಧ್ಯಂತರ ಕಂಬ ಅಳವಡಿಸಿಕೊಡಲು ಕೋರಲಾಯಿತು.

→ ಇದಕ್ಕೆ ಪ್ರತಿಕ್ರಿಯಿಸಿ ಕೂಡಲೇ ಮಧ್ಯಂತರ ಕಂಬ ಅಳವಡಿಸಲು ಶಾಖಾಧಿಕಾರಿಗಳಿಗೆ ಸೂಚಿಸಲಾಯಿತು.

9. ಎಫ್–2 ಫೀಡರ್ ನಲ್ಲಿ ಅಧಿಕವಾಗಿ ವಿದ್ಯುತ್ ಅಡಚಣೆ ಇದ್ದು ಸರಿಪಡಿಸಲು ಕೋರಿದರು.

→ ಈ ಸಂಬಂಧ ಪ್ರತಿಕ್ರಿಯಿಸಿ, ಕೈಗಾರಿಕ ಪ್ರದೇಶಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು, 2010ನೇ ಸಾಲಿನಲ್ಲಿ ಯು.ಜಿ.ಕೇಬಲ್ ಹಾಕಿದ್ದು ಓವರ್ ಹೆಡ್ ಲೈನ್ ಹಾಕಲು ಅವಕಾಶವಿಲ್ಲದಿರುವುದರಿಂದ ವಿದ್ಯುತ್ ಅಡಚಣೆ ಉಂಟಾಗುತ್ತಿದ್ದು ಸೂಕ್ತ ಕ್ರಮ ಕೈಗೊಂಡು ವಿದ್ಯುತ್ ಅಡಚಣೆಯನ್ನು ಕಡಿಮೆಗೊಳಿಸಲಾಗುವುದು ಎಂದು ತಿಳಿಸಲಾಯಿತು.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ., ನಗರ ಉಪವಿಭಾಗ,
ಮದ್ದೂರು

ಪ್ರತಿಯನ್ನು,

1.ಅಧೀಕ್ಷಕ ಇಂಜಿನಿಯರ್(ವಿ),ಚಾವಿಸನಿನಿ, ಕಾ ಮತ್ತು ಪಾ ವೃತ್ತ, ಮಂಡ್ಯರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.

2.ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಚಾವಿಸನಿನಿ, ವಿಭಾಗ ಮದ್ದೂರುರವರ ಅವಗಾಹನೆಗಾಗಿ ಸಲ್ಲಿಸಲಾಗಿದೆ.

3.ಮುಖ್ಯ ಕಡತ